# ಗೋಪಾಲ್ಸ್ ತಂಡದ ಹೊಸ ಹೆಜ್ಜೆ

## ಸಾವಯವ ಕೃಷಿಕರಿಗಾಗಿ 'ಸಾವಯವ ಉತ್ಪನ್ನಗಳ ಮಾಹಿತಿ ಮತ್ತು ತಯಾರಿಕಾ ಘಟಕ' ಆರಂಭ

ಮೊನ್ನೆ ಏಪ್ರಿಲ್ 14, ಬಾಬಾ ಸಾಹೇಬ್ ಅಂಬೇಡ್ಕರ್ ಜಯಂತಿಯಂದು ಗೋಪಾಲ್ಸ್ ತಂಡದ ವತಿಯಿಂದ ಮೈಸೂರು ಜಿಲ್ಲೆ ಹುಣಸೂರಿನ ನಮ್ಮ ತೋಟದಲ್ಲಿ 'ಸಾವಯವ ಉತ್ಪನ್ನಗಳ ಮಾಹಿತಿ ಮತ್ತು ತಯಾರಿಕಾ ಘಟಕ' (Organic Input centre)ವನ್ನು ಉದ್ಘಾಟಿಸಲಾಯಿತು. ಇದೇ ಸಮಯದಲ್ಲಿ ನಮ್ಮ ಕಿರಿಯ ಪುತ್ರಿ ಸಂಪದಳ ಹುಟ್ಟುಹಬ್ಬವನ್ನು ಪರಿಸರ ಮತ್ತು ರೈತಸ್ನೇಹಿಯಾಗಿ ಆಚರಿಸಿದೆವು.

ಏನಿದು ಸಾವಯವ ಪರಿಕರಗಳ ಮಾಹಿತಿ ಮತ್ತು ತಯಾರಿಕಾ ಘಟಕ? ಎಂಬ ಕುತೂಹಲ ನಿಮಗಿರುತ್ತದೆ. ಪ್ರತಿ ಗ್ರಾಮದಲ್ಲೂ ಹೇಗೆ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಮಾರಾಟ ಮಾಡುವ ಅಂಗಡಿ ಇರುತ್ತದೆಯೋ ಹಾಗೆಯೇ ಪ್ರತಿ ಹಳ್ಳಿಯಲ್ಲೂ ಸಾವಯವ ಕೃಷಿ ಪರಿಕರಗಳ ಮಾಹಿತಿ ಮತ್ತು ತಯಾರಿಕಾ ಘಟಕವಿರಬೇಕೆನ್ನುವುದು ಗೋಪಾಲ್ಸ್ ತಂಡದ ಆಶಯ. ಸಾಮಾನ್ಯವಾಗಿ ರೈತರಿಗೆ ಕೃಷಿಯ ಕುರಿತು ತಕ್ಷಣಕ್ಕೆ ಮಾಹಿತಿ ಸಿಗುವ ಮೂಲವೆಂದರೆ ಅದು ರಾಸಾಯನಿಕ ಗೊಬ್ಬರದ ಅಂಗಡಿ. ಗಿಡಗಳ ಬೆಳವಣಿಗೆಗೆ ಯಾವ ಪೋಷಕಾಂಶ, ಹುಳು ಅಥವಾ ರೋಗಬಾಧೆಗೆ ಯಾವ ಔಷಧಿ ಸಿಂಪಡಿಸಬೇಕೆನ್ನುವ ಪ್ರಾಥಮಿಕ ಮಾಹಿತಿ ಪಡೆಯುವುದು ಸಮೀಪದ ಗೊಬ್ಬರದ ಅಂಗಡಿಯಲ್ಲೇ ಅಲ್ಲವೇ? ಬಹುತೇಕ ರೈತರು ತಾವು ಬೆಳೆಯುತ್ತಿರುವ ಬೆಳೆಯಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಅಥವಾ ಒಂದೆರಡು ಹುಳು ಕಾಣಿಸಿದರೂ ಆವಶ್ಯಕತೆಯಿರಲಿ ಬಿಡಲಿ ತಕ್ಷಣ ಹೋಗಿ ಗೊಬ್ಬರದ ಅಂಗಡಿಯವರು ಕೊಡುವ ರಾಸಾಯನಿಕವನ್ನು ಖರೀದಿಸಿ ಸಿಂಪಡಿಸುತ್ತಾರೆ. ಎಷ್ಟೋ ಸಲ ಗಿಡ ಸೊರಗುತ್ತಿರುವುದು ಕೀಟದ ಹಾವಳಿಯಿಂದಲೋ ಅಥವಾ ನೀರಿನ ಕೊರತೆಯಿಂದಲೋ ಎಂಬುದು ತಿಳಿಯದೆ ನೇರವಾಗಿ ರಾಸಾಯನಿಕ ಸಿಂಪಡಿಸಿಬಿಡುವುದು ಅಭ್ಯಾಸವಾಗಿದೆ. ಇದರಿಂದ ಹಲವು ರೀತಿಯ ನಷ್ಟಗಳಿವೆ.

ರೈತರಿಗೆ ಆರ್ಥಿಕ ನಷ್ಟವಾಗುವುದಲ್ಲದೆ, ಈ ರಾಸಾಯನಿಕಗಳ ಅಂಶ (Residue) ಬೆಳೆಗಳಲ್ಲಿ ಉಳಿಯುತ್ತದೆ. ಇದನ್ನು ತಿಂದ ಜನರ ಆರೋಗ್ಯ ಹಾಳಾಗುತ್ತಿದೆ. ಇನ್ನೊಂದು ಕಡೆ ಈ ರಾಸಾಯನಿಕಗಳು ಭೂಮಿ, ಗಾಳಿ ಮತ್ತು ಜಲಮೂಲಗಳಿಗೆ ಸೇರಿ ಪಂಚಭೂತಗಳು ಮಲಿನವಾಗುತ್ತಿವೆ. ಇದಕ್ಕೆ ಪರಿಹಾರ ಸೂಚಿಸಲು ಕೃಷಿ ಇಲಾಖೆ, ಕೃಷಿ ವಿಜ್ಞಾನಕೇಂದ್ರಗಳು ಸಾಕಷ್ಟು ಕೆಲಸ ಮಾಡುತ್ತಿವೆ. ಆದರೆ ಸಮಯದ ಅಭಾವದಿಂದ ಅನೇಕ ಸಲ ರೈತರು ತಮ್ಮ ಊರಿನಿಂದ ಇಂತಹ ಸಂಸ್ಥೆಗಳಿಗೆ ಭೇಟಿಕೊಡುವುದು ವಿರಳ. ಇನ್ನೊಂದು ಕಡೆ ರಾಸಾಯನಿಕಗಳಿಗೆ ಪರ್ಯಾಯವಾಗಿ ಹಲವು ಕಂಪನಿಗಳ ಸಾವಯವ ಪರಿಕರಗಳು




ಮಾರುಕಟ್ಟೆಯಲ್ಲಿವೆ. ಆದರೆ ಇಲ್ಲೂ ಸಹ ಅದೇ ಗೊಂದಲ. ಎಷ್ಟೋ ಕಂಪನಿಗಳ ಉತ್ಪನ್ನಗಳ ಮೇಲೆ ಪ್ಲಾಂಟ್ ಬೇಸ್ಡ್ ಅಥವಾ ಆರ್ಗ್ಯಾನಿಕ್ ಎಂಬಿತ್ಯಾದಿ ಲೇಬಲ್‌ಗಳು ಇರುತ್ತವೆಯೇ ವಿನಃ ಏನನ್ನು ಬಳಸಲಾಗಿದೆ ಎಂಬ ಸ್ಪಷ್ಟವಾದ ವಿವರ ಎಲ್ಲೂ ನಮೂದಿಸಿರುವುದಿಲ್ಲ ಮತ್ತು ರೈತರು ಇವುಗಳನ್ನು ದುಬಾರಿ ಬೆಲೆಗೆ ಖರೀದಿಸಬೇಕು.

ಈ ಎಲ್ಲ ಸಮಸ್ಯೆಗಳಿಗೆ ಪರಿಹಾರವರಸುತ್ತಾ ಗೋಪಾಲ್ಸ್ ತಂಡದ ಸದಸ್ಯರು ಹಲವು ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಮೊದಲಿಗೆ ಗ್ರಾಹಕರಿಗೆ ರಾಸಾಯನಿಕ ಕೃಷಿಯಿಂದಾಗುವ ಅಪಾಯಗಳ ಕುರಿತು ಅರಿವು ಮೂಡಿಸುವುದು. ಇದರಿಂದ ಸಾವಯವ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗುತ್ತದೆ. ಇನ್ನೊಂದು ಕಡೆ ರೈತರಿಗೆ ಯಾವುದೇ ಕಂಪನಿಯ ಉತ್ಪನ್ನಗಳನ್ನು ಖರೀದಿಸದೆ ತಮ್ಮ ಜಮೀನಿನಲ್ಲೇ ಸಿಗುವ ಪರಿಕರಗಳನ್ನು ಉಪಯೋಗಿಸಿಕೊಂಡು ಹೇಗೆ ತಮಗೆ ಬೇಕಾದ ಗೊಬ್ಬರ, ಔಷಧಿ ತಯಾರಿಸಬಹುದು ಎಂಬ ತರಬೇತಿ ನೀಡಲಾಗುತ್ತಿದೆ. ಅದರಲ್ಲೂ ಪ್ರಮುಖವಾಗಿ ಒಂದು ನಾಟಿ ಹಸು ಇದ್ದರೆ ಅದರಿಂದ ಏನೆಲ್ಲಾ ಲಾಭ ಆಗುತ್ತದೆ? ಸಾವಯವ ಪದ್ಧತಿಯಲ್ಲಿ ಮಣ್ಣಿನ ಫಲವತ್ತತೆ ಹೇಗೆ ಹೆಚ್ಚಿಸಿಕೊಳ್ಳಬೇಕು? ಮಣ್ಣಿನಲ್ಲಿ ಸಾವಯವ ಇಂಗಾಲ ಹೆಚ್ಚಾದಂತೆ ರೋಗ ಮತ್ತು ಕೀಟಗಳ ಉಪಟಳ ಹೇಗೆ ಕಡಿಮೆಯಾಗುತ್ತದೆ? ಎಂಬಿತ್ಯಾದಿ ವಿಷಯಗಳನ್ನು ತಿಳಿಸುವ ಹಲವಾರು ಕಾರ್ಯಾಗಾರಗಳನ್ನು ಏರ್ಪಡಿಸಲಾಗಿದೆ. ಇಷ್ಟೇ ಅಲ್ಲದೆ ತಾವು ಬೆಳೆದ ಉತ್ಪನ್ನವನ್ನು ಹೇಗೆ ನಗರವಾಸಿಗಳಿಗೆ ಮಾರಾಟ ಮಾಡಬಹುದು ಎಂದು ಸಹ ತಿಳಿಸಲಾಗುತ್ತಿದೆ. ಹೀಗೆ ಗ್ರಾಹಕ ಮತ್ತು ರೈತರಿಬ್ಬರಿಗೂ ಅರಿವು ಮೂಡಿಸುವ ಕೆಲಸವಾಗಿವೆ. ರೈತರು ರಾಸಾಯನಿಕಗಳಿಗೆ ಬದಲಾಗಿ ಕಷಾಯ, ಕೀಟನಿರ್ವಹಣೆಗೆ ಸರಳ ಮತ್ತು ಸಹಜ ಉಪಾಯಗಳ ಕುರಿತು ಸಾಮಾಜಿಕ



● ಸಂದೀಪ್ ಮಂಜುನಾಥ್
ಎಂ.ಎಸ್ಸಿ. ಕೃಷಿ, ಹುಣಸೂರು

ಜಾಲತಾಣಗಳಲ್ಲಿ ಎಷ್ಟೇ ವಿಡಿಯೋ ನೋಡಿದರೂ ಪ್ರತ್ಯಕ್ಷವಾಗಿ ಕಂಡರೆ ಅಳವಡಿಸಿಕೊಳ್ಳುವುದು ಸುಲಭ ಎಂಬುದು ಗೋಪಾಲ್ ತಂಡದ ಅಭಿಪ್ರಾಯ. ಸಾವಯವ ಕೃಷಿಯೆಂದರೆ ಅಂಗಡಿಯಲ್ಲಿ ಸಿಗುವ ಸೋ ಕಾಲ್ಡ್ ಸಾವಯವ ಪರಿಕರಗಳನ್ನು ಖರೀದಿಸಿ ಸಿಂಪಡಿಸುವುದಲ್ಲ. ಬದಲಾಗಿ ರೈತರು ತಮ್ಮ ಜಮೀನಿನ ಸುತ್ತಮುತ್ತ ಸಿಗುವ ಪರಿಕರಗಳನ್ನೇ ಬಳಸಿ ತಾವೇ ತಮಗೆ ಬೇಕಾದ ಗೊಬ್ಬರ, ಕೀಟನಾಶಕ ತಯಾರಿಸಿಕೊಂಡರೆ ಖರ್ಚು ಕಡಿಮೆಯಾಗುತ್ತದೆ, ಪರಿಸರ ಮತ್ತು ಮಾನವನ ಆರೋಗ್ಯವೂ ಸುಧಾರಿಸುತ್ತದೆ.

ಗೋಪಾಲ್ಸ್ ತಂಡದ ಪ್ರಮುಖ ಸಲಹೆಗಾರರಾದ ಕಲಬುರ್ಗಿಯ ಸಾವಯವ ಕೃಷಿತಜ್ಞ ಶ್ರೀ ಮಲ್ಲಿನಾಥ ಹೆಮಾಡಿಯವರು 'ಮರಗಿಡಗಳ ಆಹಾರ ಮತ್ತು ಔಷಧಿ' ಎಂಬ ಪುಸ್ತಕವನ್ನು ಬರೆದಿದ್ದಾರೆ. ಈ ಪುಸ್ತಕದಲ್ಲಿ ಸಸ್ಯಗಳಿಗೆ ಬೇಕಾದ ಪೋಷಕಾಂಶ, ರೋಗ–ಕೀಟಬಾಧೆ ತಡೆಗಟ್ಟಲು ಸಾವಯವ ರೀತಿಯಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಬಹುದೆಂಬ ಕುರಿತು ಸರಳವಾದ ವಿವರಣೆಯಿದೆ. ಇವುಗಳಲ್ಲಿ ಒಂದಿಷ್ಟು ಪ್ರಮುಖ ಪರಿಕರಗಳಾದ ತಿಪ್ಪೆ ಗೊಬ್ಬರ, ಎರೆಹುಳು ಗೊಬ್ಬರ, ಎರೆಜಲ, ಮರಳು ಗಂಜಲದ ಸಾರಜನಕ, ಬೂದಿ ಗಂಜಲದ ಪೊಟ್ಯಾಶ್, ಜೀವಾಮೃತ, ಗೋಕೃಪಾಮೃತ ರೀತಿಯ ಜೈವಿಕ ಗೊಬ್ಬರಗಳು, ದಶಪರ್ಣಿ, ಅಗ್ನಿಅಸ್ತ್ರ–ನೀಮಾಸ್ತ್ರ ರೀತಿಯ ಕೀಟನಿವಾರಕಗಳು, ಹುಳಿ ಮಜ್ಜಿಗೆ ಬಳಸಿ ಹಲವು ರೀತಿಯ ರೋಗನಿವಾರಕಗಳು, ಗಂಜಲ–ಸುಣ್ಣ ಉಪ್ಪು ಬಳಸಿ ತಯಾರಿಸಬಹುದಾದ ಸಾವಯವ ಕಳೆನಾಶಕಗಳು ಮೊದಲಾದವುಗಳನ್ನು 'ಸಾವಯವ ಪರಿಕರಗಳ ಮಾಹಿತಿ ಮತ್ತು ತಯಾರಿಕಾ ಘಟಕ'ದಲ್ಲಿ ಸಿದ್ಧಪಡಿಸಲಾಗುತ್ತಿದೆ. ಈ ರೀತಿಯ ಕೇಂದ್ರಗಳ ಮೂಲಕ ಎಲ್ಲರಿಗೂ ಉಚಿತ ಮಾಹಿತಿ ನೀಡುವುದು, ನಗರವಾಸಿಗಳಲ್ಲಿ ಅರಿವು ಮೂಡಿಸುವುದು ಗೋಪಾಲ್ಸ್ ತಂಡದ ಮುಖ್ಯ ಉದ್ದೇಶ.

ಕೇವಲ ಮಾಹಿತಿಯಷ್ಟೇ ಅಲ್ಲದೆ ಆಸಕ್ತ ರೈತರಿಗೆ ತಮ್ಮ ಜಮೀನಿನಲ್ಲಿ ಇವುಗಳನ್ನು ಉಪಯೋಗಿಸಿ ಪ್ರಯೋಗ ನಡೆಸಲು ಉಚಿತವಾಗಿ ಒಂದಿಷ್ಟು ಪರಿಕರಗಳನ್ನು ನೀಡುವುದು, ಒಂದು ವೇಳೆ ರೈತರಿಗೆ ಇವುಗಳಿಂದ ಉಪಯೋಗವಿದೆ ಎನಿಸಿದರೆ ಅವರ ಜಮೀನಿನಲ್ಲೂ ಈ ರೀತಿ ಘಟಕ ಸ್ಥಾಪಿಸಲು ಮಾರ್ಗದರ್ಶನ ಮಾಡುವುದು ಅಥವಾ ರೈತರು ಈ ಪರಿಕರಗಳನ್ನು ತಯಾರಿಸಲು ತ್ರಾಸಾಗುತ್ತದೆಂದು ಭಾವಿಸಿ ನೀವೇ ತಯಾರಿಸಿಕೊಡಿ ಎಂದರೆ ಘಟಕದವರೇ ತಯಾರಿಸಿಕೊಡುವುದು ಸಹ ತಂಡದ ಕಾರ್ಯವಾಗಿದೆ. ಇದರಿಂದ ರೈತರಿಗೆ ಸ್ಥಳೀಯವಾಗಿ ಸಾವಯವ ಕೃಷಿಯ ಮಾಹಿತಿ, ಪರಿಕರಗಳು ಮತ್ತು ಮಾರುಕಟ್ಟೆಯ ಕುರಿತು ಎಲ್ಲ ಜ್ಞಾನ ಲಭಿಸಿದಂತಾಗುತ್ತದೆ. ಈ ರೀತಿ ಕೇಂದ್ರಗಳು ಪ್ರತಿ ಹಳ್ಳಿಯಲ್ಲೂ ಪ್ರಾರಂಭವಾಗಬೇಕೆಂಬುದೇ ಗೋಪಾಲ್ಸ್ ತಂಡದ ಆಶಯ. ಇದಕ್ಕೆ ಎಲ್ಲರೂ ಕೈಜೋಡಿಸಿ ತಮ್ಮ ಕೈಲಾದ ಸಹಾಯ ಮಾಡಬಹುದು.



ಸಾವಯವ ಪರಿಕರಗಳ ಕೇಂದ್ರದ ಉದ್ಘಾಟನೆಯ ಜೊತೆಗೆ ನಮ್ಮ ಕಿರಿಮಗಳಾದ ಸಂಪದಳ ಹುಟ್ಟುಹಬ್ಬವನ್ನು ಪರಿಸರ ಮತ್ತು ರೈತಸ್ನೇಹಿಯಾಗಿ ಆಚರಿಸಲಾಯಿತು. ಸುತ್ತಮುತ್ತಲಿನ 200ಕ್ಕೂ ಹೆಚ್ಚು ಬಂಧುಮಿತ್ರರು, ಸಾವಯವ ಕೃಷಿಕರು ಭಾಗಿಯಾದರು. ಆಗಮಿಸಿದವರಿಗೆಲ್ಲಾ ಪ್ರಾರಂಭದಲ್ಲೇ ನಮ್ಮ ತೋಟದ ಎಳನೀರನ್ನು ನೀಡಿದೆವು. ಉಡುಗೊರೆಯಾಗಿ ಪ್ರತಿಯೊಬ್ಬರಿಗೂ ಮರುಬಳಕೆ ಮಾಡಬಹುದಾದ ಉಕ್ಕಿನ ಸ್ಟ್ರಾ ನೀಡಿದೆವು. ಎಲ್ಲರೂ ಈ ಸ್ಟೀಲ್ ಸ್ಟ್ರಾ ಬಳಸಿ ಎಳನೀರು ಕುಡಿಯಬೇಕು ಮತ್ತು ಮುಂದೆ ಪ್ಲಾಸ್ಟಿಕ್ ಸ್ಟ್ರಾ ಬಳಸದೆ ಇದನ್ನೇ ಉಪಯೋಗಿಸಬೇಕೆಂದು ಮನವಿ ಮಾಡಿದೆವು. ಹಿರಿಕಿರಿಯರೆನ್ನದೆ ಎಲ್ಲರಿಗೂ ದೇಸೀ ಆಟಗಳನ್ನು ಆಡಿಸಲಾಯಿತು. ನಮ್ಮಲ್ಲಿರುವ ದೇಸೀ ಗೋವುಗಳಿಗೆ ಎಲ್ಲರಿಂದ ಪೂಜೆ ಮಾಡಿಸಿ ನಾಟಿ ಹಸುವಿನ ಮಹತ್ತ್ವ ತಿಳಿಸಿದೆವು. ಎರೆ ಜಲ ವಿವರಿಸುವಾಗ ಮಕ್ಕಳಿಗೆ ವಿಶೇಷ ಕುತೂಹಲ. ಎಷ್ಟೋ ಮಕ್ಕಳು 'ಎರೆಹುಳು ರೈತನ ಮಿತ್ರ' ಎಂದು ಓದಿದ್ದರೇ ವಿನಃ ನೋಡಿರಲಿಲ್ಲ. ಎರೆಹುಳು ತೊಟ್ಟಿಯಿಂದ ಹುಳು ಹಿಡಿದು ತಮ್ಮ ಕೈಮೇಲೆ ಇಟ್ಟುಕೊಂಡು ಸಂಭ್ರಮಿಸಿದರು. ಆತ್ಮೀಯರಾದ ಶ್ರೀಮತಿ ರೇಶ್ಮಾ ಅವರು ವಿವಿಧ ಬಗೆಯ ತಾಜಾ ಹಣ್ಣುಗಳನ್ನು ಆಕರ್ಷಕವಾಗಿ ಕತ್ತರಿಸಿ ಕೇಕ್ ರೀತಿ ಮಾಡಿದ್ದರು. ಆ ಹಣ್ಣುಗಳನ್ನು ಕತ್ತರಿಸಿ ಎಲ್ಲರಿಗೂ ನೀಡಿದೆವು. ರಾಮನಾಥಪುರದ ಸಿದ್ದಲಿಂಗೇಶ್ವರರು ಹಲಸಿನಹಣ್ಣು ಬಿಡಿಸಿಕೊಟ್ಟರೆ, ಮಂಡ್ಯದ ದೇಸಿ ಅಂಗಡಿ ಮಹೇಶ್ ಭೂವಳ್ಳಿಯವರು ತಾವೇ ಸಿದ್ಧಪಡಿಸಿದ ಬೆಲ್ಲದ ಮೈಸೂರು ಪಾಕ್ ತಂದು ಎಲ್ಲರ ಬಾಯಿ ಸಿಹಿ ಮಾಡಿದರು. ಹಿರಿಯರಾದ ಕುಳ್ಳೇಗೌಡರು, ದೇಸಿರಿ ನವೀನ್, ಕಣಗಾಲ್ ವೆಂಕಟೇಶ್, ಕೆಆರ್ ಪೇಟೆ ಮಂಜು, ದೇಸೀ ಬೀಜಗಳ ಸಂರಕ್ಷಕ ಕಾಳಪ್ಪ, ಗಾವಡಗೆರೆಯ ವೀರಭದ್ರಪ್ಪ, ಕನಕಶ್ರೀ ಶಿವಣ್ಣ ದಂಪತಿಗಳು, ಗೋಪಾಲ್ಸ್ ತಂಡದ ಸ್ವಯಂಸೇವಕರು ಸೇರಿದಂತೆ ಹಲವಾರು ಸಾವಯವ ಕೃಷಿಕರು ನಮ್ಮ ಸಂತೋಷದಲ್ಲಿ ಭಾಗಿಯಾಗಿದ್ದು ನಮ್ಮ ಸುಕೃತ.

ಒಟ್ಟಿನಲ್ಲಿ ಸಾವಯವ ಪರಿಕರಗಳ ಮಾಹಿತಿ ಮತ್ತು ತಯಾರಿಕಾ ಘಟಕಗಳು ಎಲ್ಲಾ ಹಳ್ಳಿಗಳಲ್ಲಿ ಪ್ರಾರಂಭವಾಗಿ ವಿಷಮುಕ್ತ ಆಹಾರ ದೊರೆತು ಸದೃಢ ಭಾರತ ನಿರ್ಮಾಣವಾಗಬೇಕು. ನೆಲ, ಜಲ ಕಲುಷಿತವಾಗದೆ ಮುಂದಿನ ಪೀಳಿಗೆಗೆ ಒಂದಿಷ್ಟು ಒಳ್ಳೆಯ ವಾತಾವರಣ ಉಳಿಸಬೇಕು. ಇದು ಕೇವಲ ಒಬ್ಬಿಬ್ಬರಿಂದ ಆಗುವುದಲ್ಲ. ಇಡೀ ಸಮಾಜ ಜೊತೆಯಾಗಬೇಕು. ನೀವೆಲ್ಲರೂ ಸಹಕರಿಸುತ್ತೀರಲ್ಲವೇ? ಯಾರಿಗೆಲ್ಲಾ ಸಾವಯವ ಕೃಷಿ ಪರಿಕರಗಳ ಮಾಹಿತಿ ಮತ್ತು ತಯಾರಿಕಾ ಘಟಕ ಪ್ರಾರಂಭಿಸಲು ಆಸಕ್ತಿಯಿದೆಯೋ ಅವರು ಗೋಪಾಲ್ಸ್‌ನ ವೆಬ್‌ಸೈಟ್ co-Friendly Living & Desi Cows | GoPals ವೀಕ್ಷಿಸಬಹುದು ಅಥವಾ 99005 96080, 95359 35622 ಸಂಖ್ಯೆಗೆ ಸಂಪರ್ಕಿಸಬಹುದು.

**(ತಮ್ಮ ಅಭಿಪ್ರಾಯವನ್ನು 9611766820ಗೆ ವಾಟ್ಸಾಪ್ ಮಾಡಿ. ಲೇಖನದ ಶೀರ್ಷಿಕೆ, ದಿನಾಂಕ ನಮೂದಿಸಿ)**